

ಮನೆ ಬಾಗಿಲಲ್ಲೇ ಸೇವಾ ಸೌಲಭ್ಯ

ಗ್ಯಾಸ್ ಸ್ಟವ್, ಮಿಕ್ಸಿ, ಕುಕ್ಕರ್ ಜಾರ್, ಪಂಪ್ ಸ್ಟವ್ ಮತ್ತಿತರ ಅಡಿಗೆ ಮನೆಯಲ್ಲಿ ಬಳಸುವ ಸಾಧನಗಳ ದುರಸ್ತಿಯನ್ನು ನಿಮ್ಮ ಮನೆ ಬಾಗಿಲಲ್ಲೇ ಮಾಡಿಕೊಡಲಾಗುವುದು. ದೂರವಾಣಿ ಕರೆ ಮಾಡಿ ಸಂಪರ್ಕಿಸಿದ ಅರ್ಧ ಗಂಟೆಯೊಳಗೆ ಸೇವೆ ಲಭ್ಯ. ಅಗತ್ಯವಾದಲ್ಲಿ ಸಂಪರ್ಕಿಸಿ

ಮಂಜು– 8618187339

13ನೇ ವರ್ಷದಲ್ಲಿ

ಹಾಸನ ವಾಣಿ

http://hassanvani.epapertoday.com ಸಂಪಾದಕರು ಲೀಲಾವತಿ E-mail:hassanvani@gmail.com

ಹಾಸನವಾಣಿ ಕನ್ನಡ ದಿನಪತ್ರಿಕೆ DAILY ಸಂಪುಟ:13 ಸಂಚಿಕೆ 188, ಶುಕ್ರವಾರ, 08–09–2017,ದೂ.ಸಂಖ್ಯೆ 265898,ಬೆಲೆ ರೂ 1.50, ಪುಟ 4 RNI-16681/2004 KA/SK/HSN-/753/2017-2019

*ಹಾಸನ ಸೆ.7: ಜನರಿಗೆ ಆಲೂಗೆಡ್ಡೆ ಬೇಸಾಯದಲ್ಲಿ ಉತ್ತಮ ಕೃಷಿ ಪದ್ಧತಿಗಳನ್ನು ತಲುಪಿಸುವ ಸದುದ್ದೇಶದಿಂದ ಹಾಸನ ತಾಲ್ಲೂಕು ಹೊನ್ನವರ ಗ್ರಾಮದಲ್ಲಿ ಸೆ.8 ಬೆಳಿಗ್ಗೆ 10 ಗಂಟೆಗೆ ಕ್ಷೇತ್ರೋತ್ಸವ ಸಮಾರೋಪ ಸಮಾರಂಭವನ್ನು ಆಯೋಜಿಸಲಾಗಿದೆ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ದಾಸರಿ ರವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದು ಗ್ರೀನ್ ಇನ್ನೋವೇಷನ್ ಸೆಂಟರ್‌ನ ರವೀಂದ್ರನಾಥ ರೆಡ್ಡಿ ತಿಳಿಸಿದ್ದಾರೆ.

ಸಂಪಾದಕೀಯ......

ಗೌರಿ..ಸಾರ್ಥಕ ಬದುಕಿನ ಧೃವತಾರೆ....!

ಸರ್ವ ಧರ್ಮ ಸಮನ್ವತೆಯ, ಸಾಮರಸ್ಯಕ್ಕೆ ಹೆಸರಾದ, ಸತ್ಯ, ಶಾಂತಿ, ತ್ಯಾಗ ಬಲಿದಾನಕ್ಕೆ ಮಹತ್ವ ನೀಡಲಾಗಿರುವ ವಿಶ್ವಕ್ಕೆ ಮಾದರಿಯಾಗಿರುವ ಕರುನಾಡಲ್ಲಿ ಮಹಿಳೆಯೊಬ್ಬರ ಸೈದ್ಧಾಂತಿಕ ಹತ್ಯೆಯೊಂದು ನಡೆದುಹೋಗಿದೆ.

ಕೊಲೆಗಡುಕರು ವ್ಯವಸ್ಥಿತವಾಗಿ ಸಂಚು ನಡೆಸಿ ಗುರುತು ಪತ್ತೆಯಾಗದಂತೆ ಅತಿ ಹತ್ತಿರದಲ್ಲಿ ನಿಂತು ಪತ್ರಕರ್ತೆ, ಸಾಮಾಜಿಕ ಕಳಕಳಿಯನ್ನು ಹೊಂದಿ ಮಾನವತಾ ವಾದವನ್ನು ಪ್ರತಿಪಾದಿಸುತ್ತಿದ್ದ 55ರ ಹರೆಯದ ಗೌರಿ .ಲಂಕೇಶ್ ಅವರನ್ನು 7ಸುತ್ತು ಗುಂಡು ಹಾರಿಸಿರುವುದು, ಮೂರು ಗುಂಡು ಹೃದಯಕ್ಕೆ ತಗುಲಿ ಸಾವಪ್ಪಿರುವುದು ಕನ್ನಡ ನಾಡಿನ ಜನತೆ ಬೆಚ್ಚಿಬೀಳುವಂತೆ ಮಾಡಿದೆ.

ಅವರ ನಿವಾಸದಲ್ಲಿಯೇ, ಬಾಗಿಲ ಬಳಿಯೇ ದುಷ್ಕರ್ಮಿಗಳು ಕಳ್ಳರು, ಸುಳ್ಳರು, ದರೋಡೆಕೋರರಂತೆ ಹಿಂಬಾಲಿಸಿ ಬಂದು ಪ್ರಾಣವನ್ನು ಎರವಲು ಪಡೆದಿರುವುದು ನಾಗರೀಕ ಸಮಾಜ ಮಮ್ಮಲ ಮರುಗುವಂತೆ ಮಾಡಿದ್ದರೆ, ಆಡಳಿತ ನಡೆಸುವವರು ನಾಚಿ ತಲೆತಗ್ಗಿಸಬೇಕಾದ ಮತ್ತು ತಮ್ಮ ಆಡಳಿತಾತ್ಮಕ ವಿಫಲತೆಗೆ ಮುಸುಕು ಧರಿಸಿಕೊಳ್ಳುವುದು ನಾಯಕತ್ವಕ್ಕೆ ಎದುರಾಗಿರುವ ಪಂಥಾಹ್ವಾನ ಎಂದೇ ಹೇಳಬೇಕಾಗುತ್ತದೆ.

ಪರಧರ್ಮ ಸಹಿಷ್ಣುತೆಯ ನೆಲೆಯಾಗಿರುವ ನಾಡಿನಲ್ಲಿ, ಅದರಲ್ಲೂ ರಾಜ್ಯದ ಹೃದಯಭಾಗವಾಗಿರುವ ಅತ್ಯಂತ ಜನನಿಬಿಢವಾಗಿರುವ ರಾಜಧಾನಿಯಲ್ಲಿ ಹೆಣ್ಣುಮಗಳೊಬ್ಬಳನ್ನು ಕೊಂದಿರುವುದಕ್ಕೆ ಜಾತಿಮತ, ಪಂಥ ಬೇಧವಿಲ್ಲದೆ, ಲಿಂಗ ತಾರತಮ್ಯವಿಲ್ಲದೆ ಒಟ್ಟು ಸಮುದಾಯದ ಪ್ರತಿಕ್ರಿಯೆ, ಖಂಡನೆ ಮಾತ್ರ ಹೆಗ್ಗಳಿಕೆಯ ಸಂಗತಿಯಾಗಿದೆ.

ನಾಡಲ್ಲದೇ, ರಾಷ್ಟ್ರದ ಉದ್ದಗಲದ ರಾಜ್ಯಗಳ ಮಾಧ್ಯಮ ಪ್ರತಿನಿಧಿಗಳು, ಜನರು ಹಾಗೂ ಆಮೇರಿಕಾ ದೇಶದ ರಾಯಭಾರ ಕಛೇರಿ ಗೌರಿ ಲಂಕೇಶ್ ಆವರ ಹತ್ಯೆಯನ್ನು ನೇರವಾಗಿ ಮತ್ತು ಸಾರಾ ಸಗಟಾಗಿ ಖಂಡಿಸಿದ್ದು, ಆಡಳಿತ ನಡೆಸುತ್ತಿರುವವರು ತಮ್ಮನ್ನು ತಾವು ಒಮ್ಮೆ ಮುಟ್ಟಿ ನೋಡಿಕೊಳ್ಳುವಂತೆ ಪ್ರತಿರೋಧ ವ್ಯಕ್ತಪಡಿಸಿದ್ದಾರೆ. ವಿಘ್ನ ಸಂತೋಷಿಗಳನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಸಹಸ್ರಾರು ಗೌರಿಯರು ಹುಟ್ಟಿಬರುತ್ತಾರೆ. ಎಂದು ಸವಾಲೆಸೆದಿದ್ದಾರೆ. ಸಿದ್ಧಾಂತವನ್ನು, ಸತ್ಯವನ್ನು, ವೈಚಾರಿಕತೆಯನ್ನು ಮಾನವತಾ ವಾದವನ್ನು ಕೊಲೆಯ ಮೂಲಕ ಮೆಟ್ಟಲು, ನಾಶಮಾಡಲು, ಸಾಧ್ಯವೇ ಇಲ್ಲ ಎಂಬ ಸಂದೇಶವನ್ನು ದುಷ್ಕರ್ಮಿಗಳಿಗೆ ರವಾನಿಸಿದ್ದಾರೆ. ಕಳೆದೆರಡು ದಿನಗಳಿಂದ ಗೌರಿ ಲಂಕೇಶ್ ಆವರ ಬರ್ಬರ ಹತ್ಯೆಗೆ ರಾಷ್ಟ್ರ ಮತ್ತು ಅಂತಾ ರಾಷ್ಟ್ರೀಯವಾಗಿ, ಮುದ್ರಣ, ದೃಶ್ಯ, ಶ್ರವ್ಯ ಮಾಧ್ಯಮಗಳು, ಫೇಸ್ ಬುಕ್ ಟ್ವಿಟರ್ ಮತ್ತಿತರ ಸಾಮಾಜಿಕ ಜಾಲ ತಾಣಗಳ ಮೂಲಕ ಖಂಡನೆ ವ್ಯಕ್ತವಾಗಿದ್ದು, ಬಹುತೇಕ ಗೌರಿಯವರ ಸಾಮಾಜಿಕ ನಿಲುವು, ಬದ್ಧತೆ, ಜೊತೆಗೆ ಅವರು ನಂಬಿದ ಸಿದ್ಧಂತ, ನಡೆದು ಕೊಂಡ ರೀತಿ, ನೀತಿ ಮತ್ತು ಪ್ರಮುಖವಾಗಿ ಪ್ರಾಮಾಣಿಕತೆಗೆ ವ್ಯಾಪಕ ಜನಬೆಂಬಲ ಸಿಕ್ಕಿದೆ ಎಂದು ವಿಶ್ಲೇಷಿಸಬಹುದಾಗಿದೆ. ಜೊತೆಗೆ ಇಂತಹ ವರ್ತನೆಯನ್ನು ಸಹಿಸುವುದಿಲ್ಲ ಎಂದು ಕುಲಬರಗಿ, ಗೋವಿಂದ ಪನ್ಸಾರೆ ನರೇಂದ್ರ ದಾಬೋಲ್ಕರ್ ಮೊದಲಾದವರ ಹತ್ಯೆ ಮತ್ತು ದುಷ್ಕರ್ಮಿಗಳನ್ನು ಇಂದಿಗೂ ಪತ್ತೆ ಹಚ್ಚದಿರುವ ಸರ್ಕಾರಕ್ಕೆ ಮತ್ತು ಪ್ರಮುಖವಾಗಿ ಪೋಲೀಸ್ ವ್ಯವಸ್ಥೆಗೆ ಮಾರ್ಮಿಕವಾಗಿ ಎಚ್ಚರಿಕೆಯನ್ನು ನೀಡಲಾಗಿದೆ ಎನ್ನಬಹುದು.

ಭಿನ್ನ ವಿಚಾರಧಾರೆಯನ್ನು ಆದನ್ನು ಪ್ರತಿಪಾದಿಸುವ ಹಾಗೂ ಅದರ ಕುರಿತು ಸಾರ್ವಜನಿಕವಾಗಿ ಧ್ವನಿ ಮೂಡಿಸುವವರ ಬಾಯನ್ನು ಶಾಶ್ವತವಾಗಿ ಮುಚ್ಚಸಿಬಿಟ್ಟರೆ, ತಮಗೆ ಜಯ ಸಿಗುವುದೆಂದು ಸಿದ್ಧಾಂತದ ವಿರೋಧಿಗಳು ಭಾವಿಸಿದ್ದರೆ ಆದು ಸುಳ್ಳು ಎಂಬುದನ್ನು ಕೂಡಾ ಗೌರಿ ಆವರಿಗೆ ಸಿಕ್ಕಿದ ಜನಬೆಂಬಲ ನಿಸ್ಸಂದೇಹವಾಗಿ ಸಾಬೀತು ಮಾಡಿದೆ ಎಂಬುದು ಅತಿಶಯೋಕ್ತಿಯುಲ್ಲ.. ಪ್ರತಿಯೊಬ್ಬರಿಗೂ ಅವರವರದೇ ಅದ ನಂಬಿಕೆಗಳು, ಅನಿಸಿಕೆಗಳು,

ಬದ್ಧತೆ ಇರುತ್ತದೆ [redacted] ಗೌರವಿಸುವ, ಚರ್ಚಿಸುವ,
ಆಲಿಸುವ ಸಹನ ಬಿರುವುದೇ ಸತ್ಯ.ಅದನ್ನು
ಯಾರೂ ಪ್ರಶ್ನಿಸ ದು ಎಂಬ ಸರ್ವಾಧಿಕಾರಿ
ಮನಸ್ಸು ಅತ್ಯಂ ದ್ದು, ನಾಶದ, ಧ್ವಂಸದ
ಸಂಸ್ಕೃತಿಗೆ ನಾಂ ಕರು ಆಗಾಗ, ಅಲ್ಲಲ್ಲಿ
ತಮ್ಮ ಪ್ರಾಣ, ವ ತಹ ಕುಮನಸ್ಸುಗಳಿಂದ
ಕಳೆದುಕೊಳ್ಳುತ್ತ ಷ್ಣುಗಳಾಗಿದ್ದಾರೆ.ಬೆಳಕು
ಕಂಡುಕೊಳ್ಳುವು
ಅದರೆ ಎ ಲ್ಲ ಎಂಬ ಮಾತಿನಂತೆ
ಕಾಲ ಚಕ್ರ ಎಂ ದೆ. ಖಂಡಿತವಾಗಿಯೂ
ದುಷ್ಕರ್ಮಿಗಳು ನಿನ ಕುಣಿಕೆಗೆ ಸಿಕ್ಕಿ
ಬೀಳುತ್ತಾರೆ. ಶಿ ಬೇಕಿದೆ.
ವ್ಯವಸ್ಥೆಯ ತೊರೆದು ಕಾಡು ಸೇರಿ
ನಕ್ಸಲರೆಂಬ ಹ ಮಾನ್ಯ ಜನರ ಧ್ವನಿಗೆ
ಧ್ವನಿಯಾದ, ಆ ಲುರು ಮತ್ತು ಆ ಭಾಗದ
ಜನರ ಸ್ನೇಹದಕ ರ್ಜಿಸಿದ ಗೌರಿ ಲಂಕೇಶ್
ಅವರ ಶ್ರಮ ಕಾ ಅವಿಸ್ಮರಣೀಯ. ಮುಖ್ಯ
ವಾಹಿನಿಯಲ್ಲಿ ಕಟ್ಟಿಕೊಳ್ಳಲು ನೆರವಾದ
ಪರಿ ಅನನ್ಯ. ಗೂ ಜನಮಾನಸದಲ್ಲಿ
ಚಿರಸ್ಥಾಯಿ, ಹ ನದಲ್ಲಿ ಜಗದ ಜನರು
ಸ್ಪಂದಿಸಿದ ರೀತಿ ತ್ಯದ ಕಹಳೆ ಜಗದಗಲ
ಪಸರಿಸಿರುವುದು ಯ ಪರಾಕಾಷ್ಟೆ.
ಮಾನವತಾ ಮ್ಮನ್ನು ನಭೂತೋ ನ
ಭವಿಷ್ಯತಿ ಎಂಬ ದೇ ವಿಮರ್ಶಿಸಬಹುದು.
ಸಾರ್ಥಕ ಬದು ಲಂಕೇಶ್. ನಿಮಗಿದೋ
ಹಾಸನವಾಣಿಯ

ಬೇಲೂರಿಗೆ ರ್ಯದರ್ಶಿ ಭೇಟಿ

ಹಾಸನ ಸ ರ ಗ್ರಾಮೀಣಾಭಿವೃದ್ಧಿ
ಸಚಿವಾಲಯದ ಮತ್ತು ಹಣಕಾಸು
ಸಲಹೆಗಾರರಾ ಸೆಪ್ಟಂಬರ್ 11ರಂದು
ಹಾಸನ ಜಿಲ್ಲೆಯ ಸ್ವಚ್ಛಗ್ರಾಮ ಯೋಜನೆ
ಕುರಿತು ಗ್ರಾಮಗ ಹಾಗೂ ಶೌಚಾಲಯಗಳ
ನಿರ್ಮಾಣದ ಸೆಪ್ಟಂಬರ್ 12ರಂದು
ಹಾಸನದಿಂದ ವಾಗಿ ಬೆಂಗಳೂರಿಗೆ
ತೆರಳುವರು ಎ ಸಾರ್ವಜನಿಕ ಸಂಪರ್ಕ
ಇಲಾಖೆಯ ಪ್ರ

ಕಾವೇರಿ ಹೋರಾಟದಲ್ಲಿ ಎಲ್ಲರೂ ಹಿಂದಿದ್ದೇವೆ: ದೇವೇಗೌಡ ಆತಂಕ

ಹಾಸನ:ಸೆ,7–ತಮಿಳುನಾಡಿಗೆ ನೀರು ಹರಿಸುವ ವಿಚಾರದಲ್ಲಿ ರಾಜ್ಯ ಸರಕಾರ ಹೇಮಾವತಿ ಅಣೆಕಟ್ಟನ್ನೆ ಟಾರ್ಗೇಟ್ ಮಾಡಲಾಗುತ್ತಿದೆ ಎಂದು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರು ಆತಂಕವ್ಯಕ್ತಪಡಿಸಿದರು.

ತಾಲ್ಲೂಕಿನ ಗೊರೂರುನಲ್ಲಿರುವ ಹೇಮಾವತಿ ಜಲಾಶಯ ವೀಕ್ಷಣೆ ಮಾಡಿ, ಮುಖ್ಯ ಇಂಜಿನಿಯರ್ ಬಳಿ ಮಾಹಿತಿ ಪಡೆದು ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರತಿ ವರ್ಷ ತಮಿಳುನಾಡಿಗೆ ನೀರು ಬಿಡುವ ವಿಚಾರದಲ್ಲಿ ಹೇಮಾವತಿ ಡ್ಯಾಂನ್ನು ಟಾರ್ಗೇಟ್ ಮಾಡುತಿದ್ದಾರೆ. ಮುಂದೆಯೂ ಅಂತಹ ಸ್ಥಿತಿಯೇ ಬರಬಹುದು ಎಂದು ಕಳವಳ ವ್ಯಕ್ತಪಡಿಸಿದರು.

ಹೇಮೆಯಿಂದ 6,130 ಕ್ಯೂಸೆಕ್ ನೀರನ್ನು ಬಿಡಲಾಗುತ್ತಿದೆ. ಆದರೇ ನೀರು ಬರುತ್ತಿರುವುದು ಕೇವಲ 1800 ಕ್ಯೂಸೆಕ್ ನೀರು ಮಾತ್ರ. ಇದೆ ರೀತಿ ನೀರು ಹರಿಸುತ್ತಿದ್ದರೇ ಮುಂದೆ ಜಿಲ್ಲೆಗೆ ಕುಡಿಯುವ ನೀರಿನ ಸಮಸ್ಯೆ ಇನ್ನು ಹೆಚ್ಚಾಗಿ ಜನರು ಸಂಕಷ್ಟ ಎದುರಿಸಬೇಕಾಗುತ್ತದೆ. ಕಾವೇರಿ ತೀರ್ಪು ಪೂರ್ಣವಾಗಿ ಬರುವ ಅಂತಿಮ ಹಂತದಲ್ಲಿ ನಾವು ಇದ್ದೇವೆ. ಇನ್ನು 2 ವಾರಗಳಲ್ಲಿ ವಾದ–ಪ್ರತಿವಾದ ಪೂರ್ಣಗೊಳ್ಳಬಹುದು. ತೀರ್ಪು ಹೊರ ಬಂದ ಮೇಲೆ ಏನು ಪರಿಣಾಮ ಬೀರುವುದೂ ತಿಳಿದಿಲ್ಲ. ಈ ಹೋರಾಟದಲ್ಲಿ ಎಲ್ಲಾರೂ ಹಿಂದೆ ಬಿದ್ದಿದೇವೆ ಎಂದು ಬೇಸರವ್ಯಕ್ತಪಡಿಸಿದರು.

ಸೆಪ್ಟಂಬರ್ ತಿಂಗಳು 30ರ ಒಳಗೆ ನೀರನ್ನು ನಿರಂತರವಾಗಿ ಹರಿಸಿದರೇ 2.8. ಮಾತ್ರ ನೀರು ಉಳಿಯುತ್ತದೆ. ಜಿಲ್ಲೆಗೆ 4 ಟಿಎಂಸಿ ನೀರು ಕುಡಿಯುವುದಕ್ಕೆ ಅವಶ್ಯಕವಾಗಿದೆ. ಇದುವರೆಗೂ ಯಾವ ನಾಲೆಗೆ ನೀರು ಬಿಟ್ಟಿದ್ದಾರೆ? ಯಾವ ಕೆರೆ ತುಂಬಿರುವುದಿಲ್ಲ. 24 ಲಿಫ್ಟಿಗೇರಷನ್ ಕಥೆ ಏನಾಗಿದೆ ಎಂದು ಅಧಿಕಾರಿಗಳಿಗೆ ಮಾಹಿತಿ ಕೇಳಿದ್ದೇನೆ ಎಂದರು.

ಹೇಮಾವತಿ ನೀರಿಗಾಗಿ ತುಮಕೂರಿನಲ್ಲಿ ರೈತನೋರ್ವ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಇಲ್ಲಿನ ಎಲ್ಲಾ ಭಾಗಕ್ಕೂ ನೀರು ಹೋಗಿರುವುದಿಲ್ಲ. ಕಾನೂನು ಸಚಿವರು ತಾಳ್ಮೆಯಿಂದ ಇರಲು ಹೇಳಿದ್ದು, ಆದರೇ ಬೆಳೆ ಬಾರದೆ ನಷ್ಟ ಹೊಂದಿದರೇ ರೈತನು ಯಾವ ತಾಳ್ಮೆ ಬರುತ್ತದೆ ಎಂದು ಪ್ರಶ್ನೆ ಮಾಡಿದರು.

ಅಮೃತ ಯೋಜನೆಯಲ್ಲಿ ನಗರಕ್ಕೆ ಶ್ವಾಶ್ವತ ನೀರು ಒದಗಿಸುವ ನಿಟ್ಟಿನಲ್ಲಿ ಹೇಮಾವತಿ ಅಣೆಕಟ್ಟಿನ ಡೆಡ್ ಸ್ಟೋರೆಜ್ ನೀರನ್ನು ಬಳಸಿಕೊಂಡು ನೀರು ಪೂರೈಸಬಹುದು. ಕೇಂದ್ರ ಮತ್ತು ರಾಜ್ಯ ಸರಕಾರ ಎರಡು ಹಣ ಹಾಕಲು ಕೈಜೋಡಿಸಿದೆ ಎಂದು ಹೇಳಿದರು.ಹಿರಿಯ ಪತ್ರಕರ್ತೆ ಗೌರಿ ಲಂಕೇಶ್‌ನನ್ನು ಹತ್ಯೆ ಮಾಡಿರುವುದು ಇದೊಂದು ಹೇಯಕೃತ್ಯವಾಗಿದೆ. ಇಡೀ ವಿಶ್ವೇ ಇಂತಹ ಘಟನೆಯನ್ನು ಖಂಡಿಸಿದೆ. ಆಕೆ ತನ್ನ ಸ್ವಂತಕ್ಕಾಗಿ ಹೋರಾಟ ಮಾಡಿರುವುದಿಲ್ಲ. ಎಲ್ಲಾರ ಒಳಿತಿಗಾಗಿ ಸಮಾಜದಲ್ಲಿ ಉತ್ತಮ ಕೆಲಸ ಮಾಡಿದವರು ಎಂದು ಇದೆ ವೇಳೆ ನೆನಪಿಸಿಕೊಂಡರು.

ಇನ್ನು ಮಳೆಗಾಗಿ ಸರಕಾರ ಮೋಡ ಬಿತ್ತನೆ ಮಾಡಿದಿಯಾ! ಎಷ್ಟು ಪ್ರಮಾಣದಲ್ಲಿ ಆ ಭಾಗಕ್ಕೆ ಮಳೆ ಬಂದಿದೆ ಎಂದು ಪ್ರಶ್ನೆ ಮಾಡಿದರು. ಈ ಸಂದರ್ಭದಲ್ಲಿ ಜೆಡಿಎಸ್ ಜಿಲ್ಲಾಧ್ಯಕ್ಷ ನಿಂಗೇಶ್, ವಿಧಾನ ಪರಿಷತ್ ಮಾಜಿ ಸದಸ್ಯ ಪಟೇಲ್ ಶಿವರಾಂ, ಕೆ.ಎಂ. ರಾಜೇಗೌಡ, ಹೊಂಗೆರೆ ರಘು ಇತರರು ಇದ್ದರು.

'ದೇವರಿಗಿಂತ ಗುರುವಿಗೆ ಹೆಚ್ಚಿನ ಮಹತ್ವ'

ಹಾಸನ,.ಸೆ.7– ಭಾರತೀಯ ಸಂಸ್ಕೃತಿಯಲ್ಲಿ ದೇವರಿಗಿಂತ ಗುರುವಿಗೆ ಹೆಚ್ಚಿನ ಮಹತ್ವವಿದೆ. 'ಗುರು ಬ್ರಹ್ಮ, ಗುರು ವಿಷ್ಣು, ಗುರುದೇವೋ ಮಹೇಶ್ವರ' ಎಂಬುದಾಗಿ ಗುರುವಿನಲ್ಲೇ ಎಲ್ಲಾ ದೇವರನ್ನು ಕಾಣುತ್ತೇವೆ. ಆದ್ದರಿಂದ ನಮ್ಮ ಬದುಕಿನ ಉನ್ನತಿಗೆ ಗುರುವಿನ ಮಾರ್ಗದರ್ಶನ ಅತ್ಯಗತ್ಯ ಎಂದು ಅಥಣಿಯ ಮೋಟಗಿ ಮಹಾಸಂಸ್ಥಾನ ಮಠದ ಶ್ರೀ ಪ್ರಭು ಚನ್ನಬಸವ ಸ್ವಾಮೀಜಿ ಹೇಳಿದರು.

ಆದಿಚುಂಚನಗಿರಿ ಮಹಾಸಂಸ್ಥಾನ ಹಾಸನ ಶಾಖಾ ಮಠದಲ್ಲಿ ನಡೆದ 'ಗುರು ತೋರಿದ ದಾರಿ ತಿಂಗಳಮಾಮನ ತೇರು' 49ನೇ ಹುಣ್ಣಿಮೆ ಕಾರ್ಯಕ್ರಮದಲ್ಲಿ 'ಗುರುವಿನಡಿಗೆ ದೇವನೆಡೆಗೆ' ಎಂಬ ವಿಷಯ ಕುರಿತು ಅವರು ವಿಶೇಷ ಉಪನ್ಯಾಸ ನೀಡಿದರು.

ಗೋವಿಂದ ಭಟ್ಟ ಮತ್ತು ಶಿಶುನಾಳ ಷರೀಫ, ರಾಮಕೃಷ್ಣ ಪರಮಹಂಸ ಮತ್ತು ಸ್ವಾಮಿ ವಿವೇಕಾನಂದರ ಉದಾಹರಣೆಗಳು ಒಳಗೊಂಡಂತೆ ಗುರು–ಶಿಷ್ಯ ಪರಂಪರೆಯು ಭಾರತದಲ್ಲಿ ಧರ್ಮಾತೀತ ಮತ್ತು ಜಾತ್ಯತೀತವಾಗಿ ಬೆಳೆದುಕೊಂಡು ಬಂದಿದೆ. ಜಾತಿ, ಧರ್ಮವನ್ನು ಮೀರಿದ ಶಿಷ್ಯ ಪ್ರೀತಿಯನ್ನು ನಾವು ಗುರುಗಳಲ್ಲಿ ಮಾತ್ರ ಕಾಣಲು ಸಾಧ್ಯ ಎಂದು ನುಡಿದರು.

ಆದಿಚುಂಚನಗಿರಿ ಮಹಾಸಂಸ್ಥಾನ ಹಾಸನ ಶಾಖಾ ಮಠದ ಶ್ರೀ ಶಂಬುನಾಥ ಸ್ವಾಮೀಜಿ ಕಾರ್ಯಕ್ರಮ ಉದ್ಘಾಟಿಸಿ ಸಾನಿಧ್ಯ ವಹಿಸಿದ್ದರು. ಕಬ್ಬಳಿ ಶಾಖಾ ಮಠದ ಶ್ರೀ ಶಿವಪುತ್ರ ಸ್ವಾಮೀಜಿ, ಜವೇನಹಳ್ಳಿ ಮಠದ ಶ್ರೀ ಸಂಗಮೇಶ್ವರ ದೇವರು, ಹುಣ್ಣಿಮೆ ಕಾರ್ಯಕ್ರಮಗಳ ಪ್ರಧಾನ ಸಂಚಾಲಕ ಹೆಚ್.ಬಿ. ಮದನಗೌಡ ಮತ್ತು ಉದ್ಯಮಿ ಶೇಷಾದ್ರಿ ಉಪಸ್ಥಿತರಿದ್ದರು.ಸಂಸ್ಕೃತ ಉಪನ್ಯಾಸಕ ಲಕ್ಷ್ಮೀನಾರಾಯಣ ಕಾರ್ಯಕ್ರಮ ನಿರೂಪಿಸಿದರು. ಶ್ರೀಮಠದ ವ್ಯವಸ್ಥಾಪಕ ಹೆಚ್.ಕೆ. ಚಂದ್ರಶೇಖರ್ ಸ್ವಾಗತಿಸಿದರು.

ಪ್ರವಾಸಿ ಸ್ಥಳಗಳ ಚಿತ್ರೀಕರಣಕ್ಕೆ ಜಿಲ್ಲಾಧಿಕಾರಿ ಸೂಚನೆ

ಹಾಸನ:ಸೆ, 7 –ಶ್ರವಣ ಬೆಳಗೊಳದಲ್ಲಿ 12 ವರ್ಷಗಳಿಗೊಮ್ಮೆ ನಡೆಯುವ ಶ್ರೀ ಭಗವಾನ್ ಬಾಹುಬಲಿ ಮಹಾಮಸ್ತಕಾಭಿಷೇಕವು 2018ರ ಫೆಬ್ರವರಿಯಲ್ಲಿ ನಡೆಯುತ್ತಿದ್ದು, ಈ ಹಿನ್ನೆಲೆಯಲ್ಲಿ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಪ್ರವಾಸಿ ಸ್ಥಳಗಳ ಬಗ್ಗೆ ಯೋಜನಾ ಬದ್ದವಾಗಿ ಪ್ರಚಾರ ಮತ್ತು ಪ್ರಸಾರ ಮಾಡಲು ಜಿಲ್ಲೆಯ ಪ್ರವಾಸಿ ಸ್ಥಳಗಳ ಚಿತ್ರೀಕರಣ ಮಾಡಲು ಕ್ರಮವಹಿಸುವಂತೆ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಸೂಚಿಸಿದರು.

ಜಿಲ್ಲಾಧಿಕಾರಿಯವರ ಕಚೇರಿ ಸಭಾಂಗಣದಲ್ಲಿಂದು ಪ್ರವಾಸೋದ್ಯಮ ಅಭಿವೃದ್ಧಿ ಕುರಿತು ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಾ ಜಿಲ್ಲೆಯು ಮಲೆನಾಡು, ಅರೆ ಮಲೆನಾಡು ಹಾಗೂ ಬಯಲುಸೀಮೆ ಪ್ರದೇಶ ಒಳಗೊಂಡಿದ್ದು, ಹಾಸನ ಜಿಲ್ಲೆಯು ನೈಸರ್ಗಿಕವಾಗಿ ಬಹಳ ಮಹತ್ವ ಪಡೆದಿದೆ. ರಾಜ್ಯದಲ್ಲಿಯೇ ಪ್ರವಾಸೋದ್ಯಮ ಅಭಿವೃದ್ಧಿಗೆ ಅತ್ಯಂತ ಉತ್ತಮ ಜಿಲ್ಲೆಯಾಗಿದೆ ಎಂದು ತಿಳಿಸಿದ ಜಿಲ್ಲಾಧಿಕಾರಿಯವರು ಜಿಲ್ಲೆಗೆ ಪ್ರವಾಸಿಗರನ್ನು ಆಕರ್ಷಿಸುವುದರಿಂದ ಜಿಲ್ಲೆಯು ಒಟ್ಟಾರೆ ಅಭಿವೃದ್ದಿಗೆ ನೆರವಾಗಲಿದೆ ಎಂದರು.

ಧಾರ್ಮಿಕ ಸ್ಥಳಗಳಿಗೆ ಭೇಟಿ ನೀಡುವ ಯಾತ್ರಿಕರು ಜಿಲ್ಲೆಯ ಪ್ರಕೃತಿದತ್ತವಾಗಿ ನೆಲೆಗೊಂಡಿರುವ ಪ್ರವಾಸಿ ಸ್ಥಳಗಳ ವೀಕ್ಷಣೆ ಮಾಡಲು ಕುತೂಹಲ ಮೂಡುವಂತೆ ಕ್ರಿಯಾಶೀಲವಾಗಿ ಚಿತ್ರೀಕರಿಸಿ ಅವುಗಳೊಂದಿಗೆ ಹಾಸನ ಜಿಲ್ಲೆ ಕುರಿತ ಹಾಡನ್ನು ಜೋಡಣೆ ಮಾಡುವಂತೆ ಮಹಾಮಸ್ತಕಾಭಿಷೇಕ ಕುರಿತು ಉಚಿತವಾಗಿ ಪ್ರಚಾರ ಮಾಡಲು ಮುಂದೆ ಬಂದಿರುವ ವಾಸು ಅಗರಬತ್ತಿ ಸಂಸ್ಥೆಯವರಿಗೆ ತಿಳಿಸಿದರಲ್ಲದೆ, ಪ್ರತಿಯೊಂದು ಸ್ಥಳಕ್ಕೆ ಒಂದು ಇತಿಹಾಸ, ಹಿನ್ನೆಲೆ, ಮಹತ್ವ ಇರು ತ್ತದೆ, ಅದನ್ನು ಚಿತ್ರೀಕರಣದಲ್ಲಿ ಅಳವಡಿಸಿ ಜನರ ಮನಮುಟ್ಟು ವಂತಿರಬೇಕು ಎಂದರು.

ವರ್ಷಕ್ಕೊಮ್ಮೆ ಬಾಗಿಲು ತೆರೆಯುವ ಹಾಸನದ ಅಧಿದೇವತೆ ಹಾಸನಾಂಬ ದೇವಿ ದೇವಸ್ಥಾನ ಬಹಳ ವಿಶೇಷತೆಯಿಂದ ಕೂಡಿದೆ ಎಂದ ಜಿಲ್ಲಾಧಿಕಾರಿಯವರು ನಿಗದಿತ ಅವಧಿಯಲ್ಲಿ ದೇವರ ದರ್ಶನಕ್ಕೆ ಲಕ್ಷಾಂತರ ಜನರು ರಾಜ್ಯದ ವಿವಿದೆಡೆಗಳಿಂದ ಆಗಮಿಸುತ್ತಾರೆ. ಆ ಸಂದರ್ಭದಲ್ಲಿ ದೊಡ್ಡ ಪರದೆಗಳಲ್ಲಿ ಜಿಲ್ಲೆಯ ಪ್ರವಾಸಿ ಸ್ಥಳಗಳ ಬಗ್ಗೆ ಪ್ರಸಾರ ಮಾಡುವುದರಿಂದ ಯಾತ್ರಿಕರು ಪ್ರವಾಸಿ ಸ್ಥಳಗಳಿಗೆ ಭೇಟಿ ನೀಡಲು ಸಹಕಾರಿಯಾಗಲಿದೆ ಎಂದರು.

ಮಹಾ ಮಸ್ತಕಾಭಿಷೇಕ ವಿಶೇಷಾಧಿಕಾರಿ ಬಿ.ಎನ್.ವರಪ್ರಸಾದ್ ರೆಡ್ಡಿ, ಜಿಲ್ಲಾ ವಾರ್ತಾಧಿಕಾರಿ ವಿನೋದ ಚಂದ್ರ, ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕರಾದ ಜಿತೇಂದ್ರನಾಥ್, ಆಕಾಶವಾಣಿ ವಿಜಯ ಅಂಗಡಿ ಮತ್ತಿತರರು ಸಭೆಯಲ್ಲಿ ಭಾಗವಹಿಸಿದ್ದರು.

'ಆರೋಪದಲ್ಲಿ ಹುರುಳಿಲ್ಲ'

ಬೇಲೂರು.ಸೆ.7: –ಪುರಸಭಾ ಮಾಜಿ ಅಧ್ಯಕ್ಷರಾದ ತೊ.ಚ. ಅನಂತಸುಬ್ಬರಾಯರು ಹಾಗೂ ಶ್ರೀನಿಧಿಯವರು ನನ್ನ ವಿರುದ್ದ ಇಲ್ಲ–ಸಲ್ಲದ ಆರೋಪಗಳನ್ನು ಮಾಡಿದ್ದಾರೆ. ಆರೋಪಿಸುವ ಮೊದಲು ದಾಖಲೆ 'ಗಳನ್ನು ತರಲಿ ಎಂದು ಪುರಸಭಾ ಮಾಜಿ ಅಧ್ಯಕ್ಷ ಹೆಚ್.ಎಂ. ದಯಾನಂದ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ನಾನು ಬೇಲೂರು ಪುರಸಭೆಯಲ್ಲಿ ಅಧ್ಯಕ್ಷರಾದ ಸಂದರ್ಭದಲ್ಲಿ ಕಾಲೇಜು ಆಸ್ತಿಯ ಖಾತೆ ರದ್ದು ಮಾಡಬೇಕು ಎಂದು ಜಿಲ್ಲಾಧಿಕಾರಿಗಳಿಗೆ ದಿನಾಂಕ–20–10–2011 ರಲ್ಲಿ ಪತ್ರ ಬರೆದಿದ್ದು, ಜೆಪಿ ನಗರ ಎಂಬ ಹೆಸರನ್ನು ಹೆದ್ದಾರಿ ಎಂದು ಬದಲಾವಣೆ ಮಾಡಲಾಗಿದೆ, ಈ ಆಸ್ತಿ ಹೆದ್ದಾರಿ ಬಳಿ ಇಲ್ಲವೇ? ಎಂದ ಅವರು ನನ್ನ ಅಧ್ಯಕ್ಷ ಅವಧಿ ಮುಗಿದ ಬಳಿಕ ಇದೇ ತೊ.ಚ. ಅನಂತಸುಬ್ಬರಾಯರು ಪುರಸಭಾ ಅಧ್ಯಕ್ಷರಾಗಿದ್ದ ವೇಳೆ ಜಿಲ್ಲಾಧಿಕಾರಿಗಳು ಖಾತೆ ರದ್ದು ಮಾಡಬೇಕು ಎಂದು ಹೇಳಿದರು ತೊ.ಚ.ಅನಂತ ಸುಬ್ಬರಾಯರವರು ಏಕೆ? ರದ್ದು ಮಾಡಲು ಮೀನಾ–ಮೇಷ ಎಣಿಸಿದ್ದಾರೆ ಎಂಬ ಬಗ್ಗೆ ಸ್ಪಷ್ಟಪಡಿಸಿಬೇಕು ಎಂದರು

ಸಚಿವರು, ಶಾಸಕರ ಜೊತೆ ಸಿಎಂ ಸುದೀರ್ಘ ಸಭೆ

ಬೆಂಗಳೂರು:ಸೆ,7– ಮೈಸೂರು, ಮಂಡ್ಯ ಮತ್ತು ಬೀದರ್ ಜಿಲ್ಲೆಯ ಸಹಕಾರ ಸಕ್ಕರೆ ಕಾರ್ಖಾನೆಗಳು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಹಿನ್ನೆಲೆಯಲ್ಲಿ ಸಿಎಂ ಸಿದ್ದರಾಮಯ್ಯ ಇಂದು ಅಧಿಕಾರಿಗಳು ಹಾಗೂ ಆಯಾ ಭಾಗದ ಶಾಸಕರು, ಸಚಿವರ ಜತೆ ಸುದೀರ್ಘ ಸಭೆ ನಡೆಸಿದರು.

ಮಂಡ್ಯ ಜಿಲ್ಲೆಯ ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆ ಎದುರಿಸುತ್ತಿರುವ ಸಮಸ್ಯೆಗಳನ್ನು ಕೂಲಂಕಷವಾಗಿ ಆಲಿಸಿದ ಸಿಎಂ, ಕಬ್ಬು ನೀಡಿರುವ ರೈತರಿಗೆ ಕೊಡಬೇಕಿರುವ 6.77 ಕೋಟಿ ರೂ.ಗಳ ಹಣವನ್ನು ಕೂಡಲೇ ಬಿಡುಗಡೆ ಮಾಡುವಂತೆ ಹಣಕಾಸು ಇಲಾಖೆ ಅಧಿಕಾರಿ ಗಳಿಗೆ ಸಿಎಂ ಸೂಚಿಸಿದರು.

ಜೊತೆಗೆ ಕಬ್ಬು ಅರೆಯುವಿಕೆ ಆರಂಭಿಸಲು 2 ಕೋಟಿ ರೂ. ನೀಡಲು ಒಪ್ಪಿಗೆ ಸೂಚಿಸಿದರು. ಅರೆಯಲು ಸಿದ್ಧವಾಗಿರುವ ಕಬ್ಬು ಪ್ರಮಾಣ ಎಷ್ಟಿದೆ ಎಂಬುದರ ಬಗ್ಗೆ ವರದಿ ನೀಡುವಂತೆ ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚಿಸಿದರು.ಮೈಸೂರು ಜಿಲ್ಲೆ ಕೆ.ಆರ್.ನಗರದ ಶ್ರೀರಾಮ ಸಹಕಾರ ಸಕ್ಕರೆ ಕಾರ್ಖಾನೆಯನ್ನು ಗುತ್ತಿಗೆ ಆಧಾರದ ಮೇಲೆ ಖಾಸಗಿಯವರಿಗೆ ವಹಿಸಲು ಸಭೆಯಲ್ಲಿ ನಿರ್ಧರಿಸಲಾಯಿತು.

ಒಂದು ಹಂತದ ಇತ್ಯರ್ಥವಾಗಿ ಕಾರ್ಮಿಕರಿಗೆ 14 ಕೋಟಿ ನೀಡಲು ಮುಖ್ಯಮಂತ್ರಿ ಆದೇಶಿಸಿದರು. ಕಾರ್ಖಾನೆಯನ್ನು ಗುತ್ತಿಗೆ ಆಧಾರದ ಮೇಲೆ ಖಾಸಗಿಯವರಿಗೆ ವಹಿಸಲು ಕೂಡಲೇ ಟೆಂಡರ್ ಕರೆಯಲು ಸೂಚಿಸಿದರು. ಸಂಕಷ್ಟದಲ್ಲಿರುವ ಕಾರ್ಖಾನೆ ಕಾರ್ಮಿಕರಿಗೆ ರಕ್ಷಣೆ ಒದಗಿಸಬೇಕಿದೆ. ಹೀಗಾಗಿ 154 ಕಾರ್ಮಿಕರಿಗೆ ಒಂದು ಹಂತದ ಇತ್ಯರ್ಥವಾಗಿ ಹಣ ನೀಡಬೇಕು ಎಂದರು. ಗುತ್ತಿಗೆ ಆಧಾರದ ಮೇಲೆ ಕಾರ್ಖಾನೆ ವಹಿಸಿಕೊಳ್ಳಲು ಯಾರೂ ಮುಂದೆ ಬಾರದೇ ಇದ್ದರೆ ಮಾರಾಟ ಮಾಡುವುದಾಗಿ ಸಭೆಯಲ್ಲಿ ಸಿಎಂ ಹೇಳಿದರು.

ಇದಕ್ಕೆ ಶಾಸಕರು ಮತ್ತು ಅಧಿಕಾರಿಗಳು ಒಪ್ಪಿಗೆ ಸೂಚಿಸಿದರು.

ಸಚಿವರಾದ ಗೀತಾ ಮಹದೇವ ಪ್ರಸಾದ್, ಶಾಸಕರಾದ ಪುಟ್ಟಣ್ಣಯ್ಯ, ಸಾ.ರಾ. ಮಹೇಶ್, ರಮೇಶ್ ಬಂಡಿಸಿದ್ದೇಗೌಡ ಸಭೆಯಲ್ಲಿ ಪಾಲ್ಗೊಂಡಿದ್ದರು. ಅದೇ ರೀತಿ ಬೀದರ್ ಸಹಕಾರ ಸಕ್ಕರೆ ಕಾರ್ಖಾನೆ ವಿಚಾರವಾಗಿಯೂ ಸಭೆಯಲ್ಲಿ ಚರ್ಚೆ ನಡೆಯಿತು. ಕಾರ್ಖಾನೆಯ ಪುನಾರಂಭಕ್ಕೆ 20 ಕೋಟಿ ರೂ.ಗಳ ಅಗತ್ಯವಿದೆ ಎಂದು ಆ ಭಾಗದ ಶಾಸಕರು ತಿಳಿಸಿದರು.

ವಿದ್ಯಾ ವಿಕಾಸ ಕಛೇರಿ ಉದ್ಘಾಟನೆ

ಶ್ರವಣಬೆಳಗೊಳ:ಮಹಾಮಸ್ತಕಾಭಿಷೇಕ ಮಹೋತ್ಸವದ ಅಂಗವಾಗಿ ಪಟ್ಟಣದ ವಿಂಧ್ಯಗಿರಿ ತಪ್ಪಲಿನ ಸ್ವಾಗತ ಕಾರ್ಯಾಲಯದ ಬಳಿ ಆರಂಭಗೊಂಡ ವಿದ್ಯಾ ವಿಕಾಸ ಯೋಜನೆಯ ಕಛೇರಿಯನ್ನು ಪೂಜ್ಯ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಉದ್ಘಾಟಿಸಿದರು.

ಪೂಜ್ಯ ಸ್ವಾಮೀಜಿವರ ಪ್ರೇರಣೆಯಂತೆ ರಾಷ್ಟ್ರ ಮತ್ತು ಸಮಾಜ ನಿರ್ಮಾಣಕ್ಕಾಗಿ ವಿದ್ಯಾವಿಕಾಸ ಯೋಜನೆಗಳ ಅಡಿಯಲ್ಲಿ ಶ್ರೀ ಕ್ಷೇತ್ರ ಶ್ರವಣಬೆಳಗೊಳದಲ್ಲಿ ವಿದ್ಯಾಸಂಸ್ಥೆಗಳ ಸ್ಥಾಪನೆ ಹಾಗೂ ಮತ್ತಿತರ ಯೋಜನೆಗಳನ್ನು ಅನುಷ್ಠಾನಗೊಳಿಸುವುದು ಎಂದು ವಿದ್ಯಾ ವಿಕಾಸ ಯೋಜನೆಯ ಮುಖ್ಯ ಸಂಯೋಜಕ ಜವಾಹರ್‌ಲಾಲ್ ಜೈನ್ ತಿಳಿಸಿದರು.

ಈ ವೇಳೆ ಶ್ರವಣಬೆಳಗೊಳ ದಿಗಂಬರ ಜೈನ ಸಮಾಜದ ಅಧ್ಯಕ್ಷ ಜಿ.ಪಿ.ಪದ್ಮಕುಮಾರ್, ಎಸ್.ಎಸ್.ಪೌದನ್ ಜೈನ್, ಬಾಹುಬಲಿ ತಾಂತ್ರಿಕ ಮಹಾ ವಿದ್ಯಾಲಯದ ಶೈಕ್ಷಣಿಕ ಅಧಿಕಾರಿ ಗೋಮಟೇಶ ಎಂ.ರಾವನ್ನವರ್, ಪ್ರತಿಷ್ಠಾ ಚಾರ್ಯರಾದ ಉದಯಕುಮಾರ್ ಮುಂತಾದವರಿದ್ದರು.

ಗೌರಿ ಲಂಕೇಶ್ ಹತ್ಯೆ ಖಂಡಿಸಿ ಪ್ರತಿಭಟನೆ

ಹಾಸನ:ಸೆ,7–ಹಿರಿಯ ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ ಮಾಡಿರುವ ಕೊಲೆಗಡುಕರನು, ಕೂಡಲೇ ಬಂಧಿ [redacted] ಲಂಕೇಶ್ ಅವರು ಬಡವರ, ಶೋಷಿತರ ಧ್ವನಿಯಾಗಿದ್ದರು. ಈ ಕೊಲೆ ಪ್ರಕರಣ ನಿಜಕ್ಕೂ ಹೇಯ ಕೃತ್ಯವಾಗಿದ್ದು ಈಗಾಗಲೇ ರಾಜ್ಯಾದ್ಯಂತ ಇದಕ್ಕೆ ಖಂಡನೆ ವ್ಯಕ್ತವಾಗುತ್ತಿದ್ದು ವಿಚಾರವಾದಿಗಳನ್ನು ಕೊಳ್ಳುವಂತಹ ವಾತಾವರಣ ನಿರ್ಮಾಣವಾಗುತ್ತಿರುವುದು ಪ್ರಜಾಪ್ರಭುತ್ವದ ಕಗ್ಗೊಲೆ ಆಗುತ್ತಿದೆ. ಇಂತಹ ಕೊಲೆಗಡುಕರನ್ನು ಸರ್ಕಾರ ಕೂಡಲೇ ಬಂಧಿಸಬೇಕು ಎಂದು ಒತ್ತಾಯಿಸಿ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು.

SG GROUPS OF COMPANY

Company Name :- SG GROUOS
Company Details :-
We are developing all kind of software projects like
Software developing
Website developing
Blog developing
Apps developing
E paper developing
Address:- Bhumika 1 main,
2 cross, shanthi nagar
Hassan-573201
Phone Number:-
9738222641, 797571813 ..
E-Mail ID :- sgroups125@gmail.com

SG Groups